ಗಿಛೇರಿ ಏನಾದ್ರೂ ಇದೆಯಾ ಹೇಗೆ...' ಎಂಬಂತೆ. ನಮ್ಮ ಮನೆಯ ಪದ ಸಂಪತ್ತು ಸಂಗೀತದ ಪದ ಸಂಪತ್ತುಗಳೇ ಆಗಿದ್ದವು. 1998ರಲ್ಲಿ ನನ್ನ ತಂಗಿ ವಿದುಷಿ ರಾಜರಾಜೇಶ್ವರಿ ಮತ್ತು ಆಕೆಯ ಪತಿ ಹರೀಶ್ ಭಟ್ 'ಕೃಷ್ಣಗಾನ ಸುಧಾ' ಎಂಬ ಸಂಗೀತ ಶಾಲೆಯನ್ನು ಆರಂಭಿಸಿದರು. 1999ರಲ್ಲಿ ಕರುಂಬಿತ್ತಿಲ್ ಮನೆಯಲ್ಲಿ ನಡೆದ ಪೂಜೆಗೆ ಮಕ್ಕಳನ್ನು ಆಹ್ವಾನಿಸಿ ಪಿಳ್ಳಾರಿ ಗೀತೆಗಳದ್ದೊಂದು ಕಛೇರಿ ಮಾಡಿದರು. 2000ನೇ ಇಸವಿಯಲ್ಲಿ ವಾರ್ಷಿಕ ಪೂಜೆಗೆ ಮಕ್ಕಳದ್ದೊಂದು ಸಂಗೀತ ಶಿಬಿರ ಆರಂಭಿಸಿ ಪಾಠ ಹೇಳುವುದೂ ರೂಢಿಯಾಯಿತು. ಮತ್ತೆರಡು ವರ್ಷದಲ್ಲಿ ಇದು ಪರಿಪೂರ್ಣ ಶಿಬಿರವಾಗಿ ಮಾರ್ಪಟ್ಟಿತು. ಹೀಗೆ ಅಂದು ಹತ್ತು ಹದಿನೈದು ಮಕ್ಕಳ ಶಿಬಿರವಾಗಿದ್ದುದು ಇಂದು 350ಕ್ಕೂ ಹೆಚ್ಚು ಮಂದಿ ಸಂಗೀತಾಸಕ್ತರು ಬಂದು ಭಾಗವಹಿಸುವ ಶಿಬಿರವಾಗಿದೆ. ಸಂಗೀತಲೋಕದಲ್ಲಿ ಈಗ ಡಿಸೆಂಬರ್‌ನಲ್ಲಾದರೆ ಚೆನ್ನೈಯ ಮಾರ್ಗಳಿ ಸಂಗೀತೋತ್ಸವ, ಏಪ್ರಿಲ್‌ನಲ್ಲಾದರೆ ಅಮೆರಿಕದ ಕ್ಲೀವ್‌ಲ್ಯಾಂಡ್‌ನ ಸಂಗೀತೋತ್ಸವ, ಮೇ ತಿಂಗಳು ಬಂತೆಂದರೆ ಕರುಂಬಿತ್ತಿಲ್ ಸಂಗೀತೋತ್ಸವ ಎಂಬ ಮಾತು ಜನಪ್ರಿಯವಾಗಿದೆ.

**◆ ಈ ಸಂಗೀತ ಶಿಬಿರವು ಇಷ್ಟೊಂದು ಜನಪ್ರಿಯವಾಗಲು ಕಾರಣವೇನು? ಶಿಬಿರದಲ್ಲಿ ಅಂಥದ್ದೇನು ವಿಶೇಷ?**

ಶಿಬಿರವನ್ನು ನಾವು 'ವಿಶೇಷ'ವಾಗಿರಬೇಕು ಎಂದು ಆಯೋಜಿಸುವುದಲ್ಲ. ಬದಲಿಗೆ ಎಲ್ಲರೂ ಸೇರಿ ಪ್ರೀತಿಯಿಂದ ಸಂಗೀತದ ವಾತಾವರಣ ಸೃಷ್ಟಿಯಾಗಬೇಕು, ಹೊಸ ತಲೆಮಾರಿಗೆ ಸಂಗೀತವು ದಾಟಬೇಕು ಎಂಬ ಆಶಯದಿಂದ ರೂಪಿಸುತ್ತೇವೆ. ಅದಕ್ಕೆ ಮೂಲ ಪ್ರೇರಣೆ, ನೇತೃತ್ವ ಎಲ್ಲವೂ ಅಮ್ಮನದ್ದೇ. ಕರುಂಬಿತ್ತಿಲ್ ಮನೆಗೆ ಕಲಿಯಲು ಬಂದ ಮಕ್ಕಳು ಮನೆಯ ಮಕ್ಕಳಾಗಿಯೇ ಇರುತ್ತಾರೆ. ಕೊಠಡಿಯಲ್ಲಿ, ಚಾವಡಿಯಲ್ಲಿ, ಅಟ್ಟದಲ್ಲಿ ಎಲ್ಲೆಂದರಲ್ಲಿ ರಾತ್ರಿ ಹಗಲು ಎನ್ನದೇ ಕುಳಿತು ಅಭ್ಯಾಸ ಮಾಡುತ್ತಾರೆ. ನಿದ್ದೆಗೆಟ್ಟು ಕಲಿತುದನ್ನು ಮನನ ಮಾಡಿ ಗಟ್ಟಿ ಮಾಡಿಕೊಳ್ಳುತ್ತಾರೆ. ಮನೆಯವರು ದೈನಂದಿನ ಅಡುಗೆ ಏನು ಮಾಡುತ್ತಾರೋ ಅದುವೇ ಶಿಬಿರಾರ್ಥಿಗಳಿಗೂ ದೊರೆಯುತ್ತದೆ. ಗಂಜಿ ಚಟ್ನಿ, ಅನ್ನ, ಸಾಂಬಾರು, ಪಲ್ಯ... ಹೀಗೆ. ಸರಳ ಆಹಾರ. ಅವರವರ ತಟ್ಟೆ ಅವರವರೇ ತೊಳೆದಿಟ್ಟು ಮತ್ತೆ ಕಲಿಯುವಿಕೆಯ ಗುಂಗಿನಲ್ಲಿ ಮುಳುಗುತ್ತಾರೆ. ಜೊತೆಗೆ ಇಲ್ಲಿಗೆ ಅನೇಕ ಪ್ರಸಿದ್ಧ ಸಂಗೀತ ಸಾಧಕರು ಪಾಠ ಮಾಡಲು ಸ್ವಯಂ ಉತ್ಸಾಹದಿಂದ ಬರುತ್ತಾರೆ. ಅಷ್ಟೇ ಅಲ್ಲ ಅವರು ಶಿಬಿರಾರ್ಥಿಗಳು ಹೇಗೆ ಸರಳವಾದ ಜೀವನ ಮಾಡುತ್ತಾರೋ ಹಾಗೆಯೇ ಸರಳವಾಗಿ ಇರುತ್ತಾರೆ. ಇಲ್ಲಿ ಸಂಗೀತವೊಂದೇ ಮೇಲು, ಉಳಿದ ಯಾರೂ ಮೇಲಲ್ಲ, ಕೀಳಲ್ಲ ಎಂಬುದೇ ತತ್ವ. ಸಂಗೀತ ಕಲಿಯುವವರು ಮಾತ್ರವಲ್ಲ, ಸಂಗೀತ ಕೇಳುವವರು, ನೃತ್ಯದಲ್ಲಿ ಆಸಕ್ತಿ ಇರುವವರು, ವಾದನ ಕಲೆಯಲ್ಲಿ ಆಸಕ್ತಿ ಇರುವವರು, ರಸಿಕರು ಎಲ್ಲರೂ ಭಾಗವಹಿಸುತ್ತಾರೆ. ನಮ್ಮ ಕರುಂಬಿತ್ತಿಲ್ ಮನೆ ಎತ್ತರದ ಬೆಟ್ಟಗಳ ನಡುವೆ ಇರುವ ಕೃಷಿ ಭೂಮಿಯ ನಡುವೆಯಿದೆ. ಈ ಬೆಟ್ಟಗಳೆಡೆಯಲ್ಲಿರುವ ರಸ್ತೆಯಲ್ಲಿ ಇಳಿದು ಬರುವಾಗ, 'ಅಹಂ ಅನ್ನು ಬೆಟ್ಟದಲ್ಲಿಯೇ ಇಟ್ಟು ನಾವು ಮನೆಗೆ ಇಳಿಯಬೇಕು' ಎಂದು ಸಂಗೀತ ಗುರುಗಳೊಬ್ಬರು ಹೇಳಿದರು. ಇಲ್ಲಿಗೆ ಬರುವ ಎಲ್ಲರೂ ಸಂಗೀತವನ್ನೇ ಆದ್ಯತೆಯನ್ನಾಗಿ ಎತ್ತರದಲ್ಲಿ ಇರಿಸಿದವರೇ ಆಗಿದ್ದಾರೆ. ನನ್ನ ಗುರುಗಳಾದ ಲಾಲ್‌ಗುಡಿ ಜಿ. ಜಯರಾಮನ್, ದಿಗ್ಗಜರಾದ ಬಾಲಮುರಳೀಕೃಷ್ಣ ಆಗಮಿಸಿ ಪಾಠ ಮಾಡಿದ್ದಾರೆ. ಪ್ರಸಿದ್ಧ ಸಂಗೀತ ವಿದುಷಿ ಬಾಂಬೇ ಜಯಶ್ರೀ ಇದನ್ನು ಪ್ರೇಮಶಿಬಿರ ಎಂದು ಕರೆದಿದ್ದಾರೆ. ಹೀಗೆ ದಿಗ್ಗಜರು ಬಂದು ಸಾಮಾನ್ಯರಂತೆ ನಮ್ಮೊಡನೆ ಉಂಡು, ತಮಗೆ ತಿಳಿದ ವಿಚಾರಗಳನ್ನು ಮಕ್ಕಳಿಗೆ ಹೇಳಿಕೊಡುವುದೆಂದರೆ ಅದು ಕರುಂಬಿತ್ತಿಲ್ ಮನೆಯ ಸೌಭಾಗ್ಯವಾಗಿದೆ. ಅಮ್ಮನ ಹಾರೈಕೆಯಾಗಿದೆ. ಇದಕ್ಕೆ ನನ್ನೊಡನೆ ಟೊಂಕಕಟ್ಟಿ ನನ್ನ ತಂಗಿಯರಾದ ವಿದುಷಿಯರಾದ ಭಾರತಿ ನಾಗರಾಜ್, ರಾಜಲಕ್ಷ್ಮಿ ಕೃಷ್ಣಮೂರ್ತಿ, ರೇಖಾ ನರೇಶ್, ರಾಜರಾಜೇಶ್ವರಿ ಹರೀಶ್ ಭಟ್ ಅವರು ಮತ್ತು ಅವರ ಕುಟುಂಬ ನಿಲ್ಲುತ್ತದೆ. ಮದುವೆಯ ನಂತರ ನನ್ನ ಪತ್ನಿ ಚಂದ್ರಿಕಾ ಕೂಡ

